ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 980

ಸದಸ್ಯರ ಹೆಸರು : ಶ್ರೀ ಎನ್. ರವಿಕುಮಾರ್

ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸುವ ದಿನಾಂಕ : 13-03-2020

ಕ್ರ.ಸ	ಪ್ರಶ್ನೆ	ಉತ್ತರ
ಅ	ಬೆಂಗಳೂರು ನಗರದಲ್ಲಿ ಬಿ.ಎಂ.ಟಿ.ಸಿ ಬಸ್ಸುಗಳ ಹೊಗೆಯಿಂದ ಹೆಚ್ಚುತ್ತಿರುವ ವಾಯು ಮಾಲಿನ್ಯ ತಡೆಯಲು ಸರ್ಕಾರ ಕೈಗೊಂಡ ಕ್ರಮಗಳೇನು;	ಬೆಂಮಸಾಸಂಸ್ಥೆಯಲ್ಲಿ ಒಟ್ಟು 6617 ಬಸ್ಸುಗಳು ಕಾರ್ಯಾಚರಣೆಯಲ್ಲಿದ್ದು, ಎಲ್ಲಾ ಬಸ್ಸುಗಳಲ್ಲಿ ಹೊಗೆ ಸೂಸುವಿಕೆಯ ಸಾಂದ್ರತೆಯು ನಿಗದಿತ ಮಟ್ಟಕ್ಕಿಂತಲೂ ಕಡಿಮೆ ಇರುವಂತೆ ಉತ್ತಮವಾಗಿ ತಾಂತ್ರಿಕ ನಿರ್ವಹಣೆ ಮಾಡಲಾಗುತ್ತಿದೆ. ಆದಾಗ್ಯೂ, ಸಂಸ್ಥೆಯ ಬಸ್ಸುಗಳಿಂದ ವಾಯು ಮಾಲಿನ್ಯ ತಡೆಗಟ್ಟಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ. 1. ಪ್ರತಿ ತಿಂಗಳು ಘಟಕದಲ್ಲಿ ಎಲ್ಲಾ ವಾಹನಗಳನ್ನು ಹೊಗೆ ತಪಾಸಣೆಗೆ ಒಳಪಡಿಸಲಾಗುತ್ತಿದ್ದು, ದೋಷಕಂಡು ಬರುವ ವಾಹನಗಳನ್ನು ದುರಸ್ಥಿ ಪಡಿಸಿದ ನಂತರವಷ್ಟೆ ಕಾರ್ಯಾಚರಣೆ ಮಾಡಲಾಗುತ್ತದೆ. 2. ವಾಯು ಮಾಲಿನ್ಯ ನಿಯಂತ್ರಿಸಲು ಕೇಂದ್ರ ಮೋಟಾರ್ ವಾಹನ ನಿಯಮ 115 (2) 1989 ಪ್ರಕಾರ ಬಿ.ಎಸ್-2/3 ಬಸ್ಸುಗಳಿಗೆ ಪ್ರತಿ ಆರು ತಿಂಗಳಿಗೊಮ್ಮೆ ಹಾಗೂ ಬಿ.ಎಸ್.-4 ಬಸ್ಸುಗಳಿಗೆ ಪ್ರತಿ ಒಂದು ವರ್ಷಕ್ಕೆ ಆನ್‌ಲೈನ್ ಮುಖೇನ ಹೊಗೆ ತಪಾಸಣೆಯನ್ನು ಮಾಡಲಾಗುತ್ತಿದೆ. 3. ಬೆಂ.ಮ.ಸಾ.ಸಂಸ್ಥೆಯ ಆಯ್ದ ಟಿ.ಟಿ.ಎಂ.ಸಿ. ಮತ್ತು ಪ್ರಮುಖ ಬಸ್ ನಿಲ್ದಾಣಗಳಲ್ಲಿ ಅನಿರೀಕ್ಷಿತ ಹೊಗೆ ತಪಾಸಣೆ ನಡೆಸಿ ಹೆಚ್ಚು ಹೊಗೆ ಹೊರ ಸೂಸುವ ವಾಹನಗಳು ಕಂಡುಬಂದಲ್ಲಿ ದುರಸ್ಥಿಗೆ ಒಳಪಡಿಸಲು ಕೂಡಲೇ ಘಟಕಕ್ಕೆ ಕಳುಹಿಸಿ, ದುರಸ್ಥಿಯ ನಂತರವಷ್ಟೆ ಕಾರ್ಯಾಚರಣೆಗೆ ನಿಯೋಜಿಸಲಾಗುತ್ತಿದೆ.
ಆ	ಬೆಂಗಳೂರು ನಗರದಲ್ಲಿ ವಾಯು ಮಾಲಿನ್ಯ ತಡೆಯಲು ವಿದ್ಯುತ್‌ಚಾಲಿತ ಬಸ್ಸುಗಳ ಸೇವೆಯನ್ನು ನಾಗರೀಕರಿಗೆ ಒದಗಿಸುವ ಬಗ್ಗೆ ಸರ್ಕಾರದ ನಿಲುವೇನು;	ಬೆಂ.ಮ.ಸಾ.ಸಂಸ್ಥೆಯು ಪ್ರಸ್ತುತ 300 ಹವಾನಿಯಂತ್ರಿತ 12 ಮೀ. ಎಲೆಕ್ಟ್ರಿಕ್ ಬಸ್ಸುಗಳನ್ನು ಕೇಂದ್ರ ಸರ್ಕಾರದ ಫೇಮ್-2 ಯೋಜನೆಯಡಿಯಲ್ಲಿ ಹಾಗೂ 90 ಹವಾನಿಯಂತ್ರಣ ರಹಿತ 9 ಮೀ. ಎಲೆಕ್ಟ್ರಿಕ್ ಬಸ್ಸುಗಳನ್ನು ಬೆಂಗಳೂರು ಸ್ಮಾರ್ಟ್ ಸಿಟಿ ಯೋಜನೆಯಡಿಯಲ್ಲಿ ಆಚರಣೆ ಮಾಡಲು ಟೆಂಡರ್ ಅನ್ನು ಆಹ್ವಾನಿಸಿದ್ದು, ಟೆಂಡರ್ ಪ್ರಕ್ರಿಯೆಯು ಜಾರಿಯಲ್ಲಿರುತ್ತದೆ. ಇದಲ್ಲದೆ, ಬೆಂ.ಮ.ಸಾ.ಸಂಸ್ಥೆಯು 2020-21ರಲ್ಲಿ 500 ಎಲೆಕ್ಟ್ರಿಕ್ ವಾಹನಗಳನ್ನು ಆಚರಣೆ ಮಾಡಲು ಯೋಜಿಸಿರುತ್ತದೆ.
ಇ	ಇದುವರೆಗೆ ಬಿ.ಎಂ.ಟಿ.ಸಿ ಯಲ್ಲಿ ಎಷ್ಟು ವಿದ್ಯುತ್ ಚಾಲಿತ ಬಸ್ಸುಗಳನ್ನು ಬಳಸಲಾಗುತ್ತಿದೆ?	ಪ್ರಸ್ತುತ ಬೆಂ.ಮ.ಸಾ.ಸಂಸ್ಥೆಯಲ್ಲಿ ಯಾವುದೇ ವಿದ್ಯುತ್ ಚಾಲಿತ ಬಸ್ಸುಗಳನ್ನು ಆಚರಣೆ ಮಾಡುತ್ತಿಲ್ಲ.

ಸಂಖ್ಯೆ: ಟಿಡಿ 81 ಟಿಸಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು